ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಲ್ಲಿ ನಿವೇಶನಗಳಿಗಾಗಿ ಅರ್ಜಿ

೭೦೬. ಶ್ರೀ ಎನ್. ಎಂ. ಅಡ್ಯಂತಾಯ (ಸುರತ್ಕಲ್).— ಮಾನ್ಯ ವಾರ್ತಾ, ಪ್ರವಾಸೋದ್ಯಮ ಹಾಗೂ ಬೆಂಗಳೂರು ಅಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ?

ಆ) ಈ ಅರ್ಜಿದಾರರಿಗೆ ನಿವೇಶನ ಒದಗಿಸಲು ಬೇಕಾಗುವ ಜಮೀನಿನ ವಿಸ್ತೀರ್ಣವೆಷ್ಟು ?

ಇ) ಈ ನಿವೇಶನಗಳಿಗಾಗಿ ಈವರೆಗೆ ಬಿ.ಡಿ.ಎ. ಎಷ್ಟು ಜಮೀನನ್ನು ಸ್ವಾಧೀನಪಡಿಸಿಕೊಂಡಿದೆ ?

ಶ್ರೀ ಎಂ. ಪಿ. ಪ್ರಕಾಶ್. (ಬೆಂಗಳೂರು ಅಭಿವೃದ್ಧಿ ವಾರ್ತಾ ಪ್ರವಾಸೋದ್ಯಮ ಸಚಿವರು) —

ಅ) ವಿವರಗಳು ಈ ಕೆಳಕಂಡಂತಿವೆ.

೧.	೧೯೮೪ ಸೆಪ್ಟೆಂಬರ್	—	೪೮೧೨೨ (ಜನವರಿ ೮೫ರಲ್ಲಿ ಹಂಚಿಕೆ ಮಾಡಲಾಯಿತು)
೨.	೧೯೮೬ ಮೇ	—	೪೬೯೨೨
೩.	೧೯೮೬ ಡಿಸೆಂಬರ್	—	೭೭೯೫೭
೪.	೧೯೮೭ ಜನವರಿ	—	೭೭೩೪೬
೫.	೧೯೮೭ ಏಪ್ರಿಲ್	—	೫೯೪೨
೬.	೧೯೮೭ ಜುಲೈ	—	೮೨೩೨೨

ಆ) ಸುಮಾರು ೫.೭೦೦ ಎಕರೆಗಳು.

		ಎಕರೆ	ಗುಂಟೆ
೧.	೧೯೮೫	೩೦೮	೨೬
೨.	೧೯೮೬	೧೧೪೬	೧೭
೩.	೧೯೮೭	೧೯೦೩	೦೨
	ಒಟ್ಟು	೩೩೬೯	೧೫

ಶ್ರೀ ಯು. ಭೂಪತಿ (ಶ್ರೀ ಅಡ್ಯಂತಾಯ ಅವರ ಪರವಾಗಿ).— ಅಧ್ಯಕ್ಷರೆ, ನಾನು ೭೦೭ನೇ ಪ್ರಶ್ನೆಯನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಇದಕ್ಕೂ ಕೂಡ ಸಮಯ ಬೇಕು ಎಂದು ಪತ್ರ ಕಳುಹಿಸಿದ್ದೇವೆ.

ಶ್ರೀ ಯು. ಭೂಪತಿ— ನನಗೆ ಉತ್ತರ ಬಂದಿದೆ. ೭೦೭ನೇ ಪ್ರಶ್ನೆ. ಮಂತ್ರಿಗಳು ನೋಡಿಕೊಂಡು ಬಂದ ಹಾಗೆ ಕಾಣುತ್ತಿಲ್ಲ.

ಶ್ರೀ ಎಂ. ಪಿ ಪ್ರಕಾಶ್.— ನಾನು ನೋಡಿಕೊಂಡು ಬಂದಿದ್ದೇನೆ. ಮಾನ್ಯ ಅಧ್ಯಕ್ಷರಿಗೆ ಪತ್ರ ಬರೆದಿರುವುದರಲ್ಲಿ ಈ ಹೆಸರು ಕೂಡ ಇದೆ. ಹೆಚ್ಚಿಗೆ ಸಮಯ ಬೇಕು ಎಂದು ಪತ್ರ ಬರೆದಿದ್ದೇವೆ. ಆದರೂ ಉತ್ತರ ಹೇಳುತ್ತೇನೆ. ತಾವು ಪ್ರಶ್ನೆಯನ್ನು ಕೇಳಿ.

ಶ್ರೀ ಯು. ಭೂಪತಿ.— ಮಾನ್ಯ ಅಧ್ಯಕ್ಷರೆ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ಎಂಬುದಕ್ಕೆ ಮೊದಲನೇ

ಉತ್ತರದಲ್ಲಿ ೪೯,೧೨೨ ಎಂದು ಕೊಟ್ಟು ಬ್ಯಾಕೆಟ್‌ನಲ್ಲಿ ಜನವರಿ ೮೫ರಲ್ಲಿ ಹಂಚಿಕೆ ಮಾಡಲಾಯಿತು ಎಂದು ಹೇಳಿದ್ದಾರೆ. ಇದು ನಿವೇಶನ ಹಂಚಿಕೆ ಮಾಡಿರುವ ಸಂಖ್ಯೆಯೋ ಅಥವಾ ನಿವೇಶನಕ್ಕಾಗಿ ಕೋರಿ ಅರ್ಜಿ ಸಲ್ಲಿಸಿರುವವರ ಸಂಖ್ಯೆಯೋ ?

ಶ್ರೀ ಎಂ. ಪಿ. ಪ್ರಕಾಶ್.— ಸನ್ಮಾನ್ಯ ಅಧ್ಯಕ್ಷರೆ, ಈ ಪಶ್ನೆಯಲ್ಲಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ ಕಳೆದ ಮೂರು ವರ್ಷಗಳಲ್ಲಿ ನಿವೇಶನಗಳಿಗಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ ಎಷ್ಟು ಎಂದು ಕೇಳಿದ್ದಾರೆ. ಅದಕ್ಕೆ ೧೯೮೪ನೇ ಸೆಪ್ಟೆಂಬರ್‌ವರೆಗೆ ಬಂದಿರುವ ಅರ್ಜಿಗಳ ಸಂಖ್ಯೆ ೪೯,೧೨೨ ಎಂದು ಕೊಟ್ಟು, ಜನವರಿ ೮೫ರಲ್ಲಿ ಕೆಲವರಿಗೆ ಹಂಚಿಕೆ ಮಾಡಲಾಯಿತು ಎಂದು ಹೆಚ್ಚಿನ ಮಾಹಿತಿಯನ್ನು ಕೊಡಲಾಗಿದೆಯೇ ವಿನಹ ಬೇರೇನೂ ಅಲ್ಲ. ಈ ಸಂಖ್ಯೆ ಬಂದಿರುವ ಅರ್ಜಿಗಳ ಸಂಖ್ಯೆ.

ಶ್ರೀ ಯು. ಭೂಪತಿ.— ಒಟ್ಟು ಅರ್ಜಿಗಳಿಂದ ತಮಗೆ ಸಂದಾಯವಾಗಿರತಕ್ಕ ಡಿಪಾಸಿಟ್ ಎಷ್ಟು ಎಂಬುದು ಮೊದಲನೆಯದು, ಎರಡನೆಯದಾಗಿ ಐದಾರು ವರ್ಷಗಳಿಂದ ಐದೈದು ಸಾರಿ ಅರ್ಜಿ ಹಾಕಿದ್ದರೂ ಸೈಟು ಸಿಕ್ಕಿಲ್ಲ ಎಂದು ಜನರು ಹೇಳುತ್ತಿದ್ದಾರೆ. ಈ ರೀತಿಯ ಪ್ರಕರಣಗಳು ತಮ್ಮ ಗಮನಕ್ಕೆ ಎಷ್ಟು ಬಂದಿವೆ? ೧೯೮೬ರಿಂದ ಈಚೆಗೆ ಎಷ್ಟು ನಿವೇಶನಗಳನ್ನು ಹಂಚಿಕೆ ಮಾಡಿದ್ದೀರಿ ?

ಶ್ರೀ ಎಂ ಪಿ. ಪ್ರಕಾಶ್.— ಸನ್ಮಾನ್ಯ ಅಧ್ಯಕ್ಷರೆ, ಈ ಪ್ರಶ್ನೆಯಲ್ಲಿ ಅನೇಕ ವಿವರಗಳನ್ನು ಕೇಳುವಂಥ ಪ್ರಯತ್ನ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಿದರೆ ವಿವರಗಳನ್ನು ಕೊಡುವುದಕ್ಕೆ ಸಾಧ್ಯವಾಗುತ್ತದೆ. ಮಾನ್ಯ ಸದಸ್ಯರಾಗಿರತಕ್ಕ ಶ್ರೀ ವೆಂಕಟರಾಮಯ್ಯ ಅವರು ಈಗಾಗಲೇ ಈ ಪ್ರಶ್ನೆಯನ್ನು ಕೇಳಿದ್ದು ಅದಕ್ಕೆ ಈ ಸದನದಲ್ಲಿ ಉತ್ತರವನ್ನು ಕೊಟ್ಟಿದ್ದೇನೆ. ಸುಮಾರು ೩೫ ಕೋಟಿ ೩೫ ಲಕ್ಷದಷ್ಟು ಕೇವಣಾತಿ ಹಣ ಸಂದಾಯವಾಗಿದೆ ಎಂಬುದನ್ನು ಈ ಸದನಕ್ಕೆ ಅರಿಕೆ ಮಾಡಿಕೊಳ್ಳುತ್ತಿದ್ದೇನೆ. ೨೦ ಸಾವಿರಕ್ಕಿಂತಲೂ ಹೆಚ್ಚು ನಿವೇಶನಗಳನ್ನು ಇತ್ತೀಚಿನ ಮೂರು ವರ್ಷಗಳಲ್ಲಿ ಹಂಚಿದ್ದೇವೆ. ಜನವರಿ ೧೯೮೬ರಿಂದ ಈಚೆಗೆ ೧೫ ಸಾವಿರ ನಿವೇಶನಗಳನ್ನು ಹಂಚತಕ್ಕ ಕೆಲಸ ಮಾಡಿದ್ದೇವೆ. ಐದನೆಯ ಪ್ರಯತ್ನದಲ್ಲೂ ನಿವೇಶನ ಸಿಕ್ಕಿಲ್ಲ ಎಂಬ ಆಪಾದನೆ ಶಾಸಕರ ಗಮನಕ್ಕೆ ಬಂದಿದ್ದರೆ ಅದು ವರ್ಗೀಕರಣದ ಮೇಲೆ ಅವಲಂಬಿತವಾಗಿರುತ್ತದೆ. ಜನರಲ್ ಕ್ಯಾಟಗರಿಯಲ್ಲಿ ಎ-೮ ಬಾರಿಯಂ ಪ್ರಯತ್ನದಲ್ಲಿ ಸಿಕ್ಕಿರತಕ್ಕ ಉದಾಹರಣೆ ಇದೆ. ಹರಿಜನ ಗಿರಿಜನರು ಮತ್ತಿತರ ಪರಿಶಿಷ್ಟ ವರ್ಗದವರ ವರ್ಗೀಕರಣದಲ್ಲಿ ಎರಡು ಅಥವಾ ಮೂರನೇ ಪ್ರಯತ್ನದಲ್ಲೇ ಸಿಕ್ಕಿರತಕ್ಕ ಉದಾಹರಣೆಗಳೂ ಇವೆ. ಒಟ್ಟು ಜೇಷ್ಠತೆಯ ಆಧಾರದ ಮೇಲೆ. ಎಷ್ಟು ಬಾರಿ ಅರ್ಜಿ ಹಾಕಿದ್ದಾರೆ ಎಂಬ ಆಧಾರದ ಮೇಲೆ ಗಣಕ ಯಂತ್ರಕ್ಕೆ ಎಲ್ಲಾ ವಿಷಯಗಳನ್ನೂ ಪೂರೈಸುವುದರಲ್ಲಿ ಮೂಲಕ ಅದರಿಂದ ಬಂದಿರತಕ್ಕ ಉತ್ತರದ ಮೂಲಕ ಯಾವುದೇ ಅನ್ಯಾಯ, ಪಕ್ಷಪಾತ ತೋರಿಸಲಾರದಂತೆ ನಿವೇಶನಗಳನ್ನು ಹಂಚಲಾಗಿದೆ.

ಶ್ರೀ ಎಂ. ಎಸ್. ಕೃಷ್ಣನ್.— ತಾವು ಹೇಳಿದಿರಿ ಐನಾರು ಸಾರಿ ಅಪ್ಲಿಕೇಷನ್ ಹಾಕಿಕೊಂಡರೂ ಕೂಡ ಸಿಕ್ಕಿಲ್ಲದೇ ಇರುವಂಥ ಉದಾಹರಣೆ ಇದೆ, ವರ್ಗೀಕರಣದ ಆಧಾರದ ಮೇಲೆ ಹಂಚಿಕೆ ಮಾಡಿದ್ದೇವೆ ಎಂದೂ ಹೇಳಿದ್ದೀರಿ. ನಾನೂ ಕೂಡ ಬಿ.ಡಿ.ಎ. ಸದಸ್ಯನಾಗಿದ್ದೆ. ನನ್ನ ಅನುಭವದಲ್ಲಿ ಹೇಳುವುದಾದರೆ ಅಲ್ಲಿ ಲಿಕ್ಕಾಚಾರ ಮಾಡುವ ರೀತಿ ಏನಿದೆ ಅದರಲ್ಲಿ ವ್ಯತ್ಯಾಸ ಆಗುತ್ತಿದೆ. ಹಿಂದೆ ಸಿ.ಐ.ಟಿ.ಬಿ. ಇದ್ದಾಗ ಮತ್ತು ಆಮೇಲೆ ಬಿ.ಡಿ.ಎ. ಆಗಿ ಸೋಮಣ್ಣನವರು ಅಧ್ಯಕ್ಷರಾಗಿದ್ದಾಗ ಈ ಕಾರ್ಡ್ ವ್ಯವಸ್ಥೆ ಇರಲಿಲ್ಲ.

ಅವರೇ ಬರೆದುಕೊಳ್ಳುತ್ತಿದ್ದರು. ಜನರು ಕೈಯ್ಯಲ್ಲೇ ಬರೆದು ಅರ್ಜಿಯನ್ನು ಹಾಕುತ್ತಿದ್ದರು. ಆ ತರದ ಅರ್ಜಿಗಳನ್ನು ಆಡ್ಮಿಟ್ ಮಾಡಿಕೊಂಡು ಈಗ ಕನ್ಸಿಡರ್ ಮಾಡುತ್ತಿಲ್ಲ. ಇದು ಆದ ಮೇಲೆ ಶ್ರೀಮಾನ್ ಬಸವಯ್ಯನವರು ಇದ್ದಂತಹ ಸಂದರ್ಭದಲ್ಲಿ ಹಾಕಿದಂತಹ ಅರ್ಜಿಗಳನ್ನು ಕನ್ಸಿಡರ್ ಮಾಡುತ್ತಿದ್ದಾರೆ. ಅವನ್ನು ಬದಲಾವಣೆ ಮಾಡಿ ಹಿಂದೆ ಹಾಕಿದಂತಹ ಅರ್ಜಿಗಳನ್ನು ತಾವು ಪರಿಗಣನೆಗೆ ತೆಗೆದುಕೊಳ್ಳಬೇಕು ಇಂತಹವರು ೮-೧೦-೧೨ ವರ್ಷಗಳಿಂದಲೂ ಕೆಲವರು ೧೫ ವರ್ಷಗಳಿಂದಲೂ ಅರ್ಜಿಗಳನ್ನು ಸಲ್ಲಿಸಿರತಕ್ಕಂತಹವರು ಇದ್ದಾರೆ. ಅಂತಹವರಿಗೆ ಅನುಕೂಲವನ್ನು ಮಾಡಿಕೊಡುವುದಕ್ಕೆ ಇದನ್ನು ಪುನರ್‌ಪರಿಶೀಲನೆ ಮಾಡಿ ಕ್ರಮ ತೆಗೆದುಕೊಳ್ಳುತ್ತೀರಾ ?

(ಅಧ್ಯಕ್ಷರು ಪೀಠವನ್ನಲಂಕರಿಸಿದರು)

ಶ್ರೀ ಎಂ.ಪಿ. ಪ್ರಕಾಶ್.—ಅನೇಕ ಸಂದರ್ಭದಲ್ಲಿ ಅರ್ಜಿಯು ನಮೂನೆಯಲ್ಲಿ ಅರ್ಜಿಗಳನ್ನು ಸಲ್ಲಿಸಿದೇ ಇರುವುದರಿಂದ, ಒದಗಿಸಬೇಕಾದಂತಹ ಮಾಹಿತಿಯನ್ನು ಕೊಡದೇ ಇರುವುದರಿಂದ ಅಂಥವುಗಳನ್ನು ಪರಿಶೀಲನೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಆ ಕಾರಣದಿಂದಾಗಿ ಅರ್ಜಿ ನಮೂನೆಯಲ್ಲೇ ಅರ್ಜಿಗಳನ್ನು ಪಾಕಬೇಕಾಗಿರುತ್ತದೆ. ಪ್ರತಿಯೊಂದು ಸಂದರ್ಭದಲ್ಲೂ ಪ್ರಾಧಿಕಾರದವರು, ಯಾವ ನಮೂನೆಯಲ್ಲಿ ಅರ್ಜಿಯನ್ನು ಪಾಕಬೇಕೆಂಬುದರ ಬಗ್ಗೆ ಪ್ರಕಟ ಮಾಡುತ್ತಾರೆ, ಅದನ್ನು ಬಿಟ್ಟು ಹಿಂದೆ ಕೈಯ್ಯಲ್ಲಿ ಬರೆದಿರತಕ್ಕ ಅರ್ಜಿಗಳನ್ನೆಲ್ಲಾ ಪರಿಗಣಿಸಬೇಕೆಂದಾದರೆ ನಾವು ಅನೇಕ ಕಾನೂನಿಷ್ಟ ತೊಡಕುಗಳಿಗೆ ಒಳಗಾಗುತ್ತೇವೆ. ಆ ಕಾರಣದಿಂದಾಗಿ ನಾನು ಹೇಳಿದ್ದನ್ನು ಮಾನ್ಯ ಕೃಷ್ಣರವರೂ ಸಹ ಒಪ್ಪಿಕೊಳ್ಳುತ್ತಾರೆಂದು ಭಾವಿಸುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಹಿಂದೆ ಯಾವುದೇ ಫಾರಂ ಇರಲಿಲ್ಲ. ಅದನ್ನು ಪರಿಶೀಲನೆ ಮಾಡುತ್ತೀರಾ ?

ಶ್ರೀ ಎಂ.ಪಿ. ಪ್ರಕಾಶ್.—ಅನೇಕ ವರ್ಷಗಳಿಂದ ಹಿಂದೆ ಬಿ.ಡಿ.ಎ.ನಲ್ಲಿ ನಿಯಮಾವಳಿಗಳೇ ಇಲ್ಲದೆ ಆಡಳಿತ ನಡೆದುಕೊಂಡು ಬಂದಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಅದನ್ನು ತಪ್ಪಿಸುವ ಸಲುವಾಗಿ ಅನೇಕ ಉಪಯುಕ್ತವಾದ ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಆ ರೀತಿಯ ಕಾರ್ಯಕ್ರಮಗಳನ್ನು ಹಾಲಿ ಕೈಗೊಂಡಿರುವುದರಿಂದ, ಇಷ್ಟೊಂದು ಭೂ ಸಂಖ್ಯೆಯಲ್ಲಿ ನಿವೇಶನಗಳನ್ನು ಹಂಚಿದಂತಹ, ಸಂದರ್ಭದಲ್ಲೂ ನಾವು ಯಾವುದೇ ಆಪಾದನೆಯಿಂದ ವಿಮುಕ್ತರಾಗಿದ್ದೇವೆ ಈ ಕಾರಣದಿಂದಾಗಿ ಅರ್ಜಿ ನಮೂನೆಯಲ್ಲೇ ಅರ್ಜಿಗಳನ್ನು ಕಳುಹಿಸತಕ್ಕೆ ಪ್ರಯತ್ನ ಮಾಡಬೇಕು, ಮತ್ತು ಶೀವಣಾತಿಯನ್ನೂ ಕೊಡಬೇಕಾಗುತ್ತದೆ. ಈ ಪ್ರಕಾರವಾಗಿ ಹಿಂದೆ ಯಾರೂ ಅರ್ಜಿಯನ್ನು ಹಾಕಿಲ್ಲ. ಉದಾಹರಣೆಯಾಗಿ ಹೇಳುವುದಾದರೆ, ಎಂ.ಎಸ್. ಕೃಷ್ಣನ್ ಎನ್ನುವಂತಹ ಹೆಸರಿನವರೊಬ್ಬರು ಅರ್ಜಿಯನ್ನು ನಾಲ್ಕಾರು ವರ್ಷಗಳಿಂದಲೂ ಹಾಕಿರುತ್ತಾರೆ. ಆದರೆ ಯಾವುದೇ ಕಾರಣದಿಂದಾಗಿ ಮಧ್ಯೆ ಅವರು ಅರ್ಜಿಯನ್ನು ಹಾಕದೆ ಕೈಬಿಟ್ಟಿರುತ್ತಾರೆ ಆದರೆ ಎಂ.ಎಸ್. ಕೃಷ್ಣನ್ ಎಂಬುವರು ಇತ್ತೀಚೆಗೆ ಅರ್ಜಿಯನ್ನು ಹಾಕಿರುತ್ತಾರೆ. ಪ್ರಾಯಶಃ ನಮ್ಮ ಅಧಿಕಾರಿಗಳ ತಾಮೂಲಿನಿಂದಾಗಿ ಅಥವಾ ಬೇರೆ ಕಾರಣದಿಂದಾಗಿ ಎಂ.ಎಸ್. ಕೃಷ್ಣನ್ ರವರು ಅರ್ಜಿಯನ್ನು ಮಧ್ಯದಲ್ಲಿ ಹಾಕಿರುವುದಿಲ್ಲವೋ ಆ ಅರ್ಜಿಯ ನಂಬರ್‌ನ್ನು ತೆಗೆದುಕೊಂಡು ಆದೂ ಕೂಡ ನಾವು ಹಿಂದೆ ಮಾಡಿದಂತಹ ಪ್ರಯತ್ನವೆಂದು ಎಂ. ಕೃಷ್ಣನ್‌ರವರು ಎಸ್. ಎನ್ನು ತೆಗೆದುಹಾಕಿ ಅರ್ಜಿಯನ್ನಾ ಹಾಕಿ ನಿವೇಶನವನ್ನು ಪಡೆದುಕೊಂಡಿರತಕ್ಕಂತಹ ಉದಾಹರಣೆಗಳು ಇವೆ. ಬೇರೊಬ್ಬರ ಅರ್ಜಿಯ ಅಪ್ಲಿಕೇಷನ್ ನಂಬರನ್ನು ತೆಗೆದುಕೊಂಡು ತನ್ನ ಅರ್ಜಿಯಂದೇ ಪರಿಗಣಿಸಿಕೊಂಡು ಶ್ರೀ—ನೇ ಅಪ್ಲಿಕೇಷನ್ ಎಂಬುದಾಗಿ ಹೇಳಿ ಅದರ ಮೂಲಕ ಪ್ರಯತ್ನ ಮಾಡಿ ನಿವೇಶನಗಳನ್ನು ಪಡೆದುಕೊಂಡಿರತಕ್ಕ ಸಂಗತಿಗಳು ಇವೆ. ಈಗ ಅಂತಹವರ ಮೇಲೆ ಕ್ರಮ ಕೈಗೊಳ್ಳುತ್ತಿದ್ದೇವೆ. ಆದ್ದರಿಂದ ಮಾನ್ಯ ಸದಸ್ಯರು ಈ ಬಗ್ಗೆ ಹೆಚ್ಚಿನಂತಹ ಸೂಚನೆ ಏನು ಇದೆ, ಅದು ಅಪೇಕ್ಷಣೀಯವಾದ ಸಲಹೆ ಎಂದು ನಾನು ಭಾವಿಸುವುದಿಲ್ಲ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕೆಂಬ ದೃಷ್ಟಿಯಿಂದ ಆ ರೀತಿ ಹೇಳುತ್ತಿದ್ದಾರೆ, ಕೆಲವರು ಮಾನ್ಯ ಮಂತ್ರಿಗಳು ಕೇಳಿದ ರೀತಿಯಲ್ಲಿ ದುರುಪಯೋಗ ಮಾಡಿಕೊಂಡಿರಬಹುದು. ಆದರೆ ಪಾಸ್ವಾರ್ಡ ಅದಲ್ಲ. ಹಿಂದೆ ಈ ತರಹ ಕಾರ್ಡು ಇದ್ದಂತಹ ಪ್ರಶ್ನೆ ಇರಲಿಲ್ಲ. ಫಾರಂ ಇರಲಿಲ್ಲ ಡಿಪಾಜಿಟ್‌ನ ಪ್ರಶ್ನೆ ಇರಲಿಲ್ಲ. ಅಂತಹ ಸಂದರ್ಭದಲ್ಲಿ ಏನಾಗಿದೆ ಎಂದರೆ ಅನೇಕ ಜನರು ಅರ್ಜಿಯನ್ನು ಕೊಟ್ಟಿದ್ದಾರೆ ಅವರ ಹೆಸರೂ ಇದೇ, ಅಡ್ರಸ್ಸೂ ಕೂಡ ಇದೆ. ಮೊದಲು ಸೈಟ್ ಅಲಾಟ್‌ಮೆಂಟ್‌ಪತ್ರವನ್ನಾ ಕೊಡಬೇಕಾಗಿತ್ತು. ಆದರೆ ನೀವು ಎಷ್ಟಾದರೂ ನಿವೇಶನವನ್ನ ಕೊಡಿ ನಾವು ಅದನ್ನು ತೆಗೆದುಕೊಳ್ಳುವುದಕ್ಕೆ ತಯಾರು ಎನ್ನುವ ಅಭಿಪ್ರಾಯದಿಂದ ಅರ್ಜಿಗಳನ್ನು ಹಾಕಿದ್ದಾರೆ. ಇಂತಹವರು ಯಾರೂ ನಿಜವಾಗಿಯೂ ಅವ್ಯವಹಾರ ಮಾಡಬೇಕೆಂದು ಇರಲಿಲ್ಲ ಇನ್ನಿದ್ದಾರೆ. ಇಂತಹವರ ಬಗ್ಗೆ ಯಾದರೂ ಪರಿಶೀಲನೆ ಮಾಡಿ ಅವರಿಗಾದರೂ ನಿವೇಶನವನ್ನು ಕೊಡಬಹುದಲ್ಲ. ಆಸರ್ಲ್ಲಿ ಯಾರು ಫ್ರಾಡ್ ಮಾಡಿದ್ದಾರೆ ಅಂತಹವರನ್ನು ಬಿಟ್ಟು ಬಿಡಿ.

ಶ್ರೀ ಎಂ.ಪಿ. ಪ್ರಕಾಶ್.–ಈಗಾಗಲೇ ನಾನು ಅರಿಕೆ ಮಾಡಿಕೊಂಡ ಹಾಗೆ, ಅನೇಕ ವರ್ಷಗಳಿಂದ ಬಿ.ಡಿ.ಎ.ನಲ್ಲಿ ಲೆಕ್ಕಾಚಾರ ಇಲ್ಲದೆ ನಡೆದುಕೊಂಡು ಬಂದಿರತಕ್ಕ ವಿಚಾರ ಅವರಿಗೂ ಗೊತ್ತಿದೆ. ಅಧ್ಯಕ್ಷರು ತಮ್ಮ ಮನಸ್ಸಿಗೆ ಬಂದ ಹಾಗೆ, ಅನೇಕ ಸಂದರ್ಭದಲ್ಲಿ ನಿವೇಶನವನ್ನು ಮಂಜೂರು ಮಾಡಬಹುದೆಂದು ಬರೆದಿರತಕ್ಕ ವಿಚಾರಗಳೂ ಇವೆ. ಆದರಿಂದ ನಿವೇಶನಗಳಿಗಾಗಿ ಯಾರು ಅರ್ಜಿಯನ್ನು ಹಾಕುತ್ತಾರೆಯೋ, ಅವರು ಕೆಲವೊಂದು ವಿಚಾರಗಳನ್ನು ಕಡ್ಡಾಯವಾಗಿ ಕೊಡಬೇಕಾಗುತ್ತದೆ. ಅವರು ಅರ್ಜಿಯಲ್ಲಿ ಸುಳ್ಳು ಮಾಹಿತಿಯನ್ನು ಒದಗಿಸಿದ್ದೇ ಆದರೆ ಅಂತಹವರ ಮೇಲೆ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ. ಅವರು ಒದಗಿಸಬೇಕಾಗಿರುವಂಥ ವಿವರಗಳು ಏನೆಂದರೆ, ಕನಿಷ್ಠ ೧೦ ವರ್ಷಗಳ ಕಾಲ ಬೆಂಗಳೂರು ನಗರದಲ್ಲಿ ವಾಸ ಮಾಡುತ್ತಿರುವ ಬಗ್ಗೆ ಪ್ರಮಾಣ ಪತ್ರವನ್ನು ಕೊಡಬೇಕಾಗುತ್ತದೆ. ಆ ಪ್ರಮಾಣ ಪತ್ರ ಇರುವುದಿಲ್ಲ. ಎರಡನೆಯದಾಗಿ ಎಷ್ಟು ಭಾರಿ ಪ್ರಯತ್ನ ಮಾಡಿದ್ದಾರೆಂಬ ಬಗ್ಗೆ ವಿವರ ಕೊಡಬೇಕಾಗುತ್ತದೆ. ಇದರ ವಿವರ ಇರುವುದಿಲ್ಲ. ತೇರ್ಗಡೆ ಹಣವನ್ನು ಕಟ್ಟಬೇಕಾಗಿರುತ್ತದೆ. ಆ ತೇರ್ಗಡೆ ಹಣವನ್ನು ಕಟ್ಟಿರುವುದಿಲ್ಲ, ಆದ್ದರಿಂದ ಅಂಥವುಗಳನ್ನು ಪರಿಗಣಿಸುವುದಕ್ಕಾಗುವುದಿಲ್ಲ. ಆದರೆ ಈಗ ಮಾಡಿರತಕ್ಕ ವ್ಯವಸ್ಥೆಯಲ್ಲಿ ಅನೇಕ ಸಂದರ್ಭದಲ್ಲಿ ಇರತಕ್ಕ ನಿವೇಶನಗಳು ಬಹಳ ಕಡಿಮೆ ಇರುವುದರಿಂದ, ಅರ್ಜಿದಾರರು ನಿವೇಶನವನ್ನು ಬಯಸಿ ಅರ್ಜಿಯನ್ನು ಹಾಕಿದ್ದರೂ, ಅವನ ಕೌಟುಂಬಿಕ ವ್ಯವಸ್ಥೆಯನ್ನು ನಾವು ಪರಿಗಣಿಸಬೇಕಾಗುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ನಾನೂ ಅದನ್ನೇ ಹೇಳುತ್ತಿರುವುದು. ಅಂತಹವುಗಳನ್ನಾದರೂ ಪರಿಶೀಲನೆ ಮಾಡುತ್ತೀರಾ ?

೧೨–೦೦ ಮಧ್ಯಾಹ್ನ

ಶ್ರೀ ಎಂ. ಪಿ. ಪ್ರಕಾಶ್.—ಅನೇಕ ಸಂದರ್ಭಗಳಲ್ಲಿ ಈ ದೇಶದ ಜನರಿಗಾಗಿ ನಿಯಮಾವಳಿಗಳನ್ನು ಕೈಬಿಡುವುಕ್ಕಾಗುವುದಿಲ್ಲ. ಸರಳವಾದಂತಹ ನಿಯಮಾವಳಿಗಳನ್ನು ಪರಿಪಾಲಿಸಿದರೆ ಮಾನ್ಯ ಕೃಷ್ಣನ್ ಅವರು ಹೇಳಿದಂತೆ ಯಾವುದೇ ಒಂದು ರೀತಿಯ ಆಪಾದನೆಗಳು ಇಲ್ಲದ ರೀತಿಯಲ್ಲಿ. ಯಾರದೇ ರಾಜಕಾರಣಿಗಳ, ಭ್ರಷ್ಟಾಚಾರ ಇಲ್ಲದಂತಹ ರೀತಿಯಲ್ಲಿ ಎಲ್ಲರಿಗೂ ನಿವೇಶನ ಸಿಕ್ಕುವುದಕ್ಕೆ ಸಾಧ್ಯವಿದೆ.

ಶ್ರೀ ಸಿ. ಬೈರೇಗೌಡ.—ಅಧ್ಯಕ್ಷರೇ, ಮಂತ್ರಿಗಳು ತಮ್ಮ ಉತ್ತರದಲ್ಲಿ ಸುಮಾರು ೩೫೦ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಡಿದ್ದೇವೆಂದು ಹೇಳಿದ್ದಾರೆ. ಈಗ ಏನು ಬೆಂಗಳೂರು ನಗರದಲ್ಲಿ ನೂರಾರು ಗೃಹ ನಿರ್ಮಾಣ ಸಹಕಾರ ಸಂಘಗಳು ಉದ್ಭವವಾಗಿವೆ ಅವುಗಳ ಜಮೀನೂ ಇದರಲ್ಲಿ ಸೇರಿದೆಯೇ ? ಹಾಗಿದ್ದರೆ ಆ ಸಹಕಾರ ಸಂಘಗಳಿಗೆ ನೀಡಿರುವ ಜಮೀನಿನ ವಿವರ ಎಷ್ಟು ? ಇಂತಹ ಸಹಕಾರ ಸಂಘಗಳು ಎಷ್ಟು ಇವೆ ?

ಶ್ರೀ ಎಂ ಪಿ. ಪ್ರಕಾಶ್.—ಸನ್ಮಾನ್ಯ ಅಧ್ಯಕ್ಷರೇ, ನನ್ನ ಜ್ಞಾಪಕದ ಮೂಲಕ ಹೇಳುವುದಾದರೆ ಬೆಂಗಳೂರಿನಲ್ಲಿ ೧೨ೆ ಗೃಹ ನಿರ್ಮಾಣ ಸಹಕಾರ ಸಂಘಗಳು ಇವೆ. ಮೂರು ಮಂದಿ ಸದಸ್ಯರ ಸಮಿತಿ ಮೂಲಕ ಶಿಫಾರಸ್ಸು ಮಾಡಲ್ಪಟ್ಟಿರುವ ಸಹಕಾರ ಸಂಘಗಳ ತಪಾಸಣೆ ಕೆಲಸ ನಡೆಯಲ್ಪಟ್ಟಿರುತ್ತದೆ. ಮತ್ತೆ ಈ ಸಹಕಾರ ಸಂಘಗಳ ಇನ್ನಿತರೆ ವಿವರಗಳ ಬಗ್ಗೆ ಮಾನ್ಯ ಸದಸ್ಯರು ಪ್ರತ್ಯೇಕ ಪ್ರಶ್ನೆಯನ್ನು ಕೇಳುವುದಾದರೆ ಎಲ್ಲಾ ವಿವರಗಳನ್ನು ನಾನು ಒದಗಿಸಿಕೊಡುತ್ತೇನೆ.

ಶ್ರೀ ಯು ಭೂಪತಿ.—ಸುಮಾರು ಅರ್ಜಿದಾರರಿಗೆ ನಿವೇಶನವನ್ನು ಒದಗಿಸುವುದಕ್ಕೆ ಬೇಕಾಗಿರತಕ್ಕ ವಿಸ್ತೀರ್ಣ ಸುಮಾರು ೫೭೦ ಎಕರೆ ಎಂದು ತಾವು ಹೇಳಿದ್ದು ಕೇವಲ ೩೫೦ ಎಕರೆ ೧೫ ಗುಂಟೆಗಳನ್ನು ಮಾತ್ರ. ತಾವು ವಶಪಡಿಸಿಕೊಂಡಿದ್ದೀರಿ. ಉಳಿದ ಭೂಮಿಯನ್ನು ತಾವು ಸ್ವಾಧೀನಪಡಿಸಿಕೊಳ್ಳುತ್ತೀರಾ ? ಸ್ವಾಧೀನಪಡಿಸಿಕೊಳ್ಳುವುದಕ್ಕೆ ಏನಾದರೂ ತೊಂದರೆ ಇದೆಯೇ ? ವರ್ಷೇ ವರ್ಷೇ ಅರ್ಜಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಬಂದಿದ್ದು ೧೯೮೬ರ ಜುಲೈನಲ್ಲಿ ೮೨೧೨ ಅರ್ಜಿಗಳು ಬಂದಿವೆ ಈ ಅರ್ಜಿಗಳು ಜಾಸ್ತಿಯಾಗುವುದಕ್ಕೆ ಕಾರಣ ಏನು ? ಬೆಂಗಳೂರಿನಲ್ಲಿ ಇರೂವವರು ಮಾತ್ರ ಸೈಟ್‌ಗಳಿಗೆ ಅರ್ಜಿಯನ್ನು ಹಾಕುವುದಿಲ್ಲ. ಹೊರಗಡೆಯವರೂ ಸೈಟುಗಳಿಗಾಗಿ ಅರ್ಜಿ ಹಾಕಿರಬಹುದು. ಈ ಪ್ರಕಾರ ಸುಮಾರು ತಾಲ್ಲೂಕಿನವರೂ, ತಾಲ್ಲೂಕಿನವರೂ ಅರ್ಜಿ ಕೊಟ್ಟಿರಬಹುದು. ಈ ಪ್ರಕಾರ ಬೆಂಗಳೂರಿನ ಜನತೆ ಎಷ್ಟು ಪ್ರಮಾಣದಲ್ಲಿ ಹಾಗೂ ಹೊರಗಿನವರು ಯಾವ ಪ್ರಮಾಣದಲ್ಲಿ ಅರ್ಜಿ ಹಾಕಿದ್ದಾರೆಂಬ ಬಗ್ಗೆ ವಿವರ ಕೊಡುತ್ತೀರಾ?

ಶ್ರೀ ಎಂ.ಪಿ. ಪ್ರಕಾಶ್.—ಹಡಗಲಿ ತಾಲ್ಲೂಕಿನಿಂದ ಯಾರೂ ಅರ್ಜಿಯನ್ನು ಹಾಕಿಲ್ಲ ಎಂದು ನಾನು ತಮ್ಮ ಮೂಲಕ ಭೂಪತಿಯವರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಸಂಡೂರಿನಿಂದ ಪ್ರಾಯಶ: ಭೂಪತಿಯವರು ಹಾಕಿದ್ದರೆ ಅದು ಅವರಿಗೇ ಗೊತ್ತಿರುತ್ತದೆ.

ಶ್ರೀ ಯು. ಭೂಪತಿ.—ನಾನು ಉದಾಹರಣೆ ಹೇಳಿದ್ದು ಅಷ್ಟೇ.

ಶ್ರೀ ಎಂ. ಪಿ. ಪ್ರಕಾಶ್.—ಸೊಂಡೂರಿನಲ್ಲಿ ಇರುವವರು ಶಾಸಕರಾಗಿದ್ದರೆ, ಶಾಸಕರ ಗೃಹ ನಿರ್ಮಾಣ ಶಾಸಕರ ಸಂಸ್ಥೆಯ ಮೂಲಕ ನಿವೇಶನವನ್ನು ಪಡೆದುಕೊಳ್ಳುವ ಹಕ್ಕು ಇರುತ್ತದೆ ೧೯೭೭ರ ಜುಲೈನಲ್ಲಿ ಹೆಚ್ಚು ಅರ್ಜಿಗಳು ಬರುವುದಕ್ಕೆ ನಾನಾ ಕಾರಣಗಳು ಇರುತ್ತವೆ. ದೊಡ್ಡ ಪ್ರಮಾಣದಲ್ಲಿ ಎಂದರೆ ಶೇಕಡ ೭.೮ ರಷ್ಟು ಪ್ರಮಾಣದಲ್ಲಿ ಬೆಂಗಳೂರು ನಗರ ಬೆಳೆಯುತ್ತಿದೆ. ನಿವೇಶನಕ್ಕೆ ಅರ್ಜಿ ಹಾಕಿರುವವರಲ್ಲಿ ೧೦ ವರ್ಷಗಳಿಂದ ಬೆಂಗಳೂರಿನಲ್ಲಿ ವಾಸ ವಾಗಿದ್ದೇನೆ ಎಂದು ಸುಳ್ಳು ಪ್ರಮಾಣ ಪತ್ರ ಕೊಟ್ಟು ಅರ್ಜಿ ಹಾಕಿರುವವರು ಇರಬಹುದು. ಅನೇಕ ಸಂದರ್ಭಗಳಲ್ಲಿ ನಿವೇಶನಗಳ ಬೆಲೆ ಹೆಚ್ಚು ಆಗುತ್ತಿರುವುದರಿಂದ ಒಂದೇ ಕುಟುಂಬದ ೪-೫ ಜನರು ಅರ್ಜಿ ಹಾಕಿರುತ್ತಾರೆ. ಕೆಲವರು ಮಕ್ಕಳಿಗೆ ಬಳುವಳಿಯಾಗಿ ಕೊಡುವುದಕ್ಕೆ ಹಣ ಹೆಚ್ಚು ಇದ್ದವರು ಹೆಚ್ಚು ಅರ್ಜಿಗಳನ್ನು ಹಾಕಿರುತ್ತಾರೆ. ಕೆಲವರು ಹೆಚ್ಚು ಹಣ ಮಾಡಿಕೊಳ್ಳಲು ಅರ್ಜಿಗಳನ್ನು ಹಾಕಿದ್ದು ಇರುತ್ತವೆ. ಈ ಕಾರಣಗಳಿಂದ ಹೆಚ್ಚು ಅರ್ಜಿಗಳು ಬಂದಿವೆ. ಬಂದಿರುವ ಅರ್ಜಿಗಳಿಗೆ ಅನುಗುಣವಾಗಿ ಹೆಚ್ಚು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿಲ್ಲವೆಂದು ಹೇಳಿದ್ದಾರೆ. ಈ ಬಗ್ಗೆ ನಾವು ನಿರಂತರ ಕಾರ್ಯಕ್ರಮ ಹಾಕಿಕೊಂಡು ಬಂದಿದ್ದೇವೆ. ಪ್ರತಿವಾರಿ ಸುಮಾರು ೬ ಲಕ್ಷ ನಿವೇಶನಗಳನ್ನು ಕೊಡಬೇಕಾಗಿದ್ದು ಆ ಪ್ರಮಾಣದಲ್ಲಿ ನಾವು ನಿವೇಶನ ಒದಗಿಸುವುದಕ್ಕೆ ಆಗುತ್ತಾ ಇಲ್ಲ, ಇನ್ನು ಮುಂದೆ ಬೆಂಗಳೂರು ನಗರದಲ್ಲಿ ಬಿಡಿ ಬಿಡಿ ನಿವೇಶನವನ್ನು ಕೊಡುವುದಕ್ಕೆ ಬದಲು ಗ್ರೂಪ್ ಹೌಸಿಂಗ್ ಸ್ಕೀಮ್ ಅಡಿಯಲ್ಲಿ ಹೆಚ್ಚು ಅಂತಸ್ತಿನ ಮನೆಗಳನ್ನು ಕಟ್ಟಿಸುವ ಯೋಜನೆ ಮಾಡುತ್ತಿದ್ದೇವೆ. ಇಪ್ಪತ್ತಿನ ದಿವಸ ಬೆಂಗಳೂರಿಂ ನಗರದಲ್ಲಿ ಹೆಚ್ಚು ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವುದಕ್ಕೆ ಸಾಧ್ಯವೇ ಎಂಬುದನ್ನೂ ನೋಡಬೇಕಾಗುತ್ತದೆ. ನಗರ ಪ್ರದೇಶದಲ್ಲಿ ಅನೇಕ ಬೇಸಾಯ ಮಾಡುತ್ತಿರುವ ಜನರನ್ನು ದೂರ ಕಳುಹಿಸಿ ನಾಗರೀಕತೆಯನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದರಿಂದ ನಗರ ಹೆಚ್ಚಿನ ತೊಂದರೆಗಳಿಗೆ ಒಳಗಾಗುತ್ತದೆ.

ಶ್ರೀ ಯು. ಭೂಪತಿ.—ಆರ್ಥಿಕವಾಗಿ ಹಿಂದುಳಿದವರಿಗೆ ನಿವೇಶನಗಳು ಸಿಗುವುದಿಲ್ಲವೆನ್ನುವ ದೂರು ಇದೆ, ಆರ್ಥಿಕವಾಗಿ ಹಿಂದುಳಿದ ವರ್ಗಗಳವರಿಗೆ ಹೆಚ್ಚು ನಿವೇಶನಗಳನ್ನು ಕೊಡುವ ಬಗ್ಗೆ ಏನಾದರೂ ಕಾರ್ಯಕ್ರಮ ಹಾಕಿಕೊಂಡಿದ್ದೀರಾ ? ಆ ಸಮಸ್ಯೆಯನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಂ. ಪಿ. ಪ್ರಕಾಶ್,—ಇದರಲ್ಲಿ ಈ ಉಪ ಪ್ರಶ್ನೆ ಬರುವುದಿಲ್ಲ. ಆದರೂ ಕೂಡ ಉತ್ತರ ಹೇಳುತ್ತೇನೆ. ಆರ್ಥಿಕವಾಗಿ ಹಿಂದುಳಿದ ವರ್ಗಗಳವರಿಗೆ ಹೆಚ್ಚು ನಿವೇಶನಗಳನ್ನು ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡು ೩ ಸಾವಿರ ನಿವೇಶನಗಳನ್ನು ಈಗಾಗಲೇ ಹಂಚಿದ್ದೇವೆ ಅದೇರೀತಿ ಅಂಬೇಡ್ಕರ್ ಜಯಂತಿ ಸಂದರ್ಭದಲ್ಲಿ ೧೦ ಸಾವಿರ ನಿವೇಶನಗಳನ್ನು ಪರಿಶಿಷ್ಟಜಾತಿ ಮತ್ತು ಜನಾಂಗದವರಿಗೆ ಕೊಡಬೇಕೆಂದು ಕಾರ್ಯಕ್ರಮವನ್ನು ಹಾಕಿಕೊಂಡು ನಿವೇಶನದ ಮೌಲಿಕ ಬೆಲೆಯ ಶೇಕಡ ೨೫ ರಷ್ಟು ಬೆಲೆಗೆ ಅವರಿಗೆ ಮೊನ್ನೆ ತಾನೆ ೨ ಸಾವಿರ ನಿವೇಶನಗಳನ್ನು ಹಂಚಿದ್ದೇವೆ ಇಂತಹ ಕಾರ್ಯಕ್ರಮಗಳನ್ನು ಹಾಕಿಕೊಂಡು ಆರ್ಥಿಕವಾಗಿ ಹಿಂದುಳಿದವರ್ಗಗಳವರಿಗೆ, ದುರ್ಬಲವರ್ಗಗಳವರಿಗೆ, ಪರಿಶಿಷ್ಟ ಜಾತಿ ಮತ್ತು ಜನಾಂಗದವರಿಗೆ ನಿವೇಶನಗಳನು ಕೊಡತಕ್ಕ ಕಾರ್ಯಕ್ರಮವನ್ನು ಮಾಡಿದ್ದೇವೆ. ಇನ್ನು ಹೆಚ್ಚು ಪ್ರಮಾಣದಲ್ಲಿ ನಿವೇಶನಗಳನ್ನು ಅವರಿಗೆ ಕೊಡುತ್ತೇವೆ.

ಶ್ರೀ ಹೆಚ್. ಎಲ್. ತಿಮ್ಮೇಗೌಡ.—ಬೆಂಗಳೂರು ನಗರದಲ್ಲಿ ೧೦ ವರ್ಷಗಳಿಂದ ಯಾರು ವಾಸವಾಗಿರುತ್ತಾರೆ ಅಂತಹವರಿಗೆ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದ್ದೀರಿ. ೧೦ ವರ್ಷಗಳಿಗಿಂತ ಹಿಚ್ಚಿಗೆ ಬೆಂಗಳೂರು ನಗರದಲ್ಲಿ ವಾಸವಾಗಿರತಕ್ಕವರಿಗೆ ಎಷ್ಟು ನಿವೇಶನಗಳನ್ನು ಕೊಟ್ಟಿದ್ದೀರಿ ? ಆ ರೀತಿ ಮಾಡುವುದಾದರೆ ಗೂ ಪ್ರೌಸಿಂಗ್ ಕಟ್ಟುವುದಕ್ಕಾಗುತ್ತದೆ, ಈ ಬಗ್ಗೆ ಏನಾದರೂ ಲೆಕ್ಕವಿದ್ದರೆ ತಿಳಿಯಬೇಕು. ಬೆಂಗಳೂರು ನಗರ ಕೆಟ್ಟು ಬೆಳೆಯುವುದನ್ನು ಈ ಬಗ್ಗೆ ಏನಾದರೂ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೆರೆ ಅದು ಫಲಪ್ರದವಾಗಿದೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಬೆಂಗಳೂರು ನಗರ ಇದಕ್ಕಿಂಥ ಹೆಚ್ಚಿಗೆ ಬೆಳೆಯಬಾರದೆನ್ನುವ ತಾತ್ವಿಕ ಪ್ರಶ್ನೆ ಇದೆ. ಅದಕ್ಕೆ ಬೆಂಗಳೂರಿಂ ಅಭಿವೃದ್ಧಿ ಪ್ರಾಧಿಕಾರದವರು ಏನೇ ಕಾರ್ಯಕ್ರಮ ಕೈಗೊಂಡರೂ ನಗರ ಬೆಳೆಯುವುದನ್ನು ತಡೆಗಟ್ಟುವುದಕ್ಕೆ ಆಗುವುದಿಲ್ಲ. ಔದ್ಯಮಿಕ ಘಟಕಗಳು ಬರಬಾರದೆಂದು ಬಂದರೆ ಹೊಸದಾಗಿ ಬರತಕ್ಕ ಔದ್ಯಮಿಕ ಘಟಕಗಳಿಗೆ ವಿದ್ಯುತ್, ನೀರು ಕಲ್ಪಿಸಬಾರದೆಂದು ಸರ್ಕಾರದ ನೀತಿ ಯಿದೆ. ಇವುಗಳ ಬೆಳವಣಿಗೆಯನ್ನು ಕುಂಠಿತಗೊಳಿಸಬೇಕೆನ್ನುವ ದೃಷ್ಟಿಯಿಂದ ಈ ಅನುಕೂಲಗಳನ್ನು ಬೇಗಳೂರಿನ ಆಚೆ ಕಲ್ಪಿಸಬೇಕೆನ್ನುವ ಅಭಿಪ್ರಾಯವಿದೆ. ಔದ್ಯಮಿಕ ಘಟಕಗಳನ್ನು ಸೀಮಿತಗೊಳಿಸಬೇಕೆನ್ನುವ ಅಭಿಪ್ರಾಯವಿದೆ. ಈ ನಿಲುವಿನ ಬಗ್ಗೆ ಸ್ಪಷ್ಟವಾದ ಕಲ್ಪನೆಯನ್ನು ಇಡಲಾಗಿದೆ. ಹಸಿರುವಲಯದ ಆಚೆ ಹೊಸ ಘಟಕಗಳನ್ನು ಸ್ಥಾಪನೆ ಮಾಡಬೇಕೆನ್ನುವ ಕಲ್ಪನೆ ಇರುವುದರಿಂದ, ಹಸಿರುವಲಯದ ಆಚೆ ಇದು ಬೆಳೆಯುವುದಕ್ಕೆ ಅವಕಾಶ ಕಲ್ಪಿಸಲಾಗಿದೆ. ಹಸಿರು ವಲಯದಲ್ಲಿ ಔದ್ಯಮಿಕ ಘಟಕಗಳು ಬರಬಾರದು ಎನ್ನುವುದನ್ನು ಈಗಾಗಲೇ ಒಪ್ಪಿಕೊಂಡಿದ್ದೇವೆ ನಿವೇಶನಗಳನ್ನು ಹೆಂಚಿರುವ ಬಗ್ಗೆ ಲೆಕ್ಕಾಚಾರದ ಪ್ರಕಾರ ಉತ್ತರವನ್ನು ಮಾನ್ಯ ಭೂಪತಿಯವರ ಪ್ರಶ್ನೆಗೆ ಉತ್ತರ ಕೊಡುವಾಗ ಹೇಳಿದ್ದೇನೆ. ಮನೆ ಯಿಲ್ಲದ ಜನಗಳಿಗೆ ನಿವೇಶನಗಳನ್ನು ಕೊಡುವ ಪ್ರಮಾಣದಲ್ಲಿ ನಿವೇಶನಗಳನ್ನು ಕಲ್ಪಿಸಲಿಕ್ಕೆ ಸಾಧ್ಯವಿಲ್ಲ. ಹೆಚ್ಚು ನಿವೇಶನಗಳನ್ನು ಕೊಟ್ಟಿದ್ದೇವೆ. ವಿಸ್ತಾರ ಹೊಂದಿದಷ್ಟು ಮನೆಗಳ ಸಮಸ್ಯೆ ಜಾಸ್ತಿಯಾಗುತ್ತದೆ. ಆ ಸಮಸ್ಯೆಯನ್ನು ಬಗೆಹರಿಸಲಿಕ್ಕೆ ಸಾಧ್ಯವಾಗುತ್ತದೆಯೇ ಎಂಬುದನ್ನು ನೋಡಲಾಗುತ್ತಿದೆ.

ಶ್ರೀ ಜ್ಞಾನದೇವ ಎಸ್. ದೊಡ್ಡಮೇಟಿ.—ಹೊರ ರಾಜ್ಯಗಳಿಂದ ಬಂದು ಇಲ್ಲಿ ಠಿಕಾಣಿ ಹೂಡಿ ಅವರು ನಿವೇಶನ ಬೇಕೆಂದು ಏನಾದರೂ ಅರ್ಜಿ ಹಾಕಿದ್ದರೆ ಅಂತಹವರಿಗೆ ನಿವೇಶನಗಳನ್ನು ಕೊಟ್ಟಿದ್ದಿರೋ ಏನು ?

ಶ್ರೀ ಎಂ. ಪಿ. ಪ್ರಕಾಶ್.—ಹೊರರಾಜ್ಯಗಳಿಂದ ಬಂದ ಜನರಿಗೆ ನಿವೇಶನಗಳನ್ನು ಕೊಡಬಾರದೆಂದು ನಿಯಮವಿಲ್ಲ. ಇರತಕ್ಕ ನಿಯಮಗಳಲ್ಲಿ ಬೆಂಗಳೂರಿನಲ್ಲಿ ಕನಿಷ್ಟ ಪಕ್ಷ ೧೦ ವರ್ಷ ವಾಸವಾಗಿರಬೇಕು. ಆ ಬಗ್ಗೆ ಅಧಿಕಾರಿಗಳ ಮೂಲಕ ಪ್ರಮಾಣಪತ್ರ ತಂದರೆ ಅಂತಹವರಿಗೆ ನಿವೇಶನ ಕೊಡಲಾಗುತ್ತದೆ. ಅವರು ಕೂಡ ಇಲ್ಲಿಯ ನಾಗರೀಕರಾಗುವುದರಿಂದ ಇದರ ಲಾಭವನ್ನು ಪಡೆಯುತ್ತಾರೆ. ಸುಳ್ಳು ದಾಖಲೆಗಳನ್ನು ಕೊಟ್ಟಿದ್ದಾರೆಂದು ನಾವು ಪತ್ರಿಕೆಗಳಲ್ಲಿ ವರದಿ ಆಗಿರುವುದನ್ನು ನೋಡಿದ್ದೇವೆ. ಅದರ ಬಗ್ಗೆ ವಿಚಾರಣೆ ಮಾಡುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದವರು ೧೦ ವರ್ಷಗಳ ಕಾಲ ಯಾರು ಬೆಂಗಳೂರುನಗರದಲ್ಲಿ ವಾಸವಾಗಿರುತ್ತಾರೆ ಅಂತಹವರಿಗೆ ನಿವೇಶನಗಳನ್ನು ಕೊಡುತ್ತೇವೆಂದು ಹೇಳುತ್ತಾರೆ. ಆದರೆ ಗ್ರಾಮಾಂತರ ಪ್ರದೇಶಗಳಿಂದ ಬಂದವರಿಗೆ ಶೇಕಡ ೧೦ರಷ್ಟು ೫ ರಷ್ಟು ನಿವೇಶನಗಳನ್ನು ಏತಕ್ಕೆ ಇಡಬಾರದು ? ಅಧಿಕಾರ ವಿಕೇಂದ್ರೀಕರಣ ಮಾಡುತ್ತೇವೆಂದು ಮಾನ್ಯ ಸಚಿವರೆ ಸಾಬ್‌ರವರು ಹೇಳುತ್ತಾರೆ. ೧೦-೧೫ ವರ್ಷ ಯಾರಿಗೂ ನಿವೇಶನ ಕೊಡುವುದಿಲ್ಲ ವೆಂದು ಒಂದು ನಿಷೇದಾಜ್ಞೆಯನ್ನು ತರಬೇಕು. ಬೆಂಗಳೂರು ನಗರವನ್ನು ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ, ಹಳ್ಳಿಪ್ರದೇಶಗಳನ್ನು ಅಭಿವೃದ್ಧಿ ಮಾಡಿ. ಹಳ್ಳಿಗಳಿಗೆ ಜನರು ಹೋಗುವ ಅವಕಾಶ ಮಾಡುವ ದೃಷ್ಟಿಯಿಂದ ತಾತ್ಕಾಲಿಕವಾಗಿ ಇದಕ್ಕೆ ನಿಷೇಧಾಜ್ಞೆಯನ್ನು ಮಾಡಬೇಕು. ಹಳ್ಳಿಗಳಿಗೆ ಜನ ಹೋಗಲಿ ನಗರಗಳು ಬೆಳೆಯುವುದನ್ನು ಕಡಿಮೆ ಮಾಡಿ. ಆ ಬಗ್ಗೆ ತಮ್ಮಲ್ಲಿ ಏನಾದರೂ ಯೋಚನೆ ಇದೆಯೇ ?

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸದಸ್ಯರ ಪ್ರಶ್ನೆಯಲ್ಲಿ ಏನು ಪ್ರಶ್ನೆ ಕೇಳಬೇಕು ಎನ್ನುವ ಸ್ಪಷ್ಟತೆ ಇಲ್ಲ. ನಾವೇನು ನಿವೇಶನಗಳನ್ನು ಕೊಡುತ್ತೇವೆ. ಅದು ಬೆಂಗಳೂರಿನಲ್ಲಿರುವವರಿಗೆ ನಿವೇಶನಗಳನ್ನು ಕೊಡುತ್ತೇವೆ.

ಶ್ರೀ ಬಿ. ಆರ್. ನೀಲಕಂಠಪ್ಪ.—ಬೆಂಗಳೂರು ನಗರ ಪ್ರದೇಶವನ್ನು ಇನ್ನು ಹತ್ತು ವರ್ಷಗಳ ಕಾಲ ಬೆಳೆಯದ ರೀತಿಯಲ್ಲಿ ನಿಷೇಧಾಜ್ಞೆಯನ್ನು ಮಾಡುತ್ತೀರಾ ? ಮತ್ತು ಹಳ್ಳಿಯವರಿಗೆ ೧೦-೧೫ ಪರ್ಸೆಂಟ್‌ನಷ್ಟು ಸೈಟು ಸಿಗುವುದಕ್ಕೆ ವ್ಯವಸ್ಥೆ ಮಾಡುತ್ತೀರಾ ? ಏಕೆಂದರೆ ಈಗ ಬರೀ ಪಟ್ಟಣದವರಿಗೆ ಮಾತ್ರ ಸೈಟು ಸಿಗುತ್ತದೆ, ಹಳ್ಳಿಯವರಿಗೆ ಸಿಗುತ್ತಿಲ್ಲ.

ಶ್ರೀ ಎಂ. ಪಿ. ಪ್ರಕಾಶ್.—ಅವರ ಮೊದಲನೇ ಪ್ರಶ್ನೆಗೆ ವಿರುದ್ಧವಾಗಿರತಕ್ಕಂಥಾದ್ದು ಎರಡನೇ ಪ್ರಶ್ನೆ. ಬೆಂಗಳೂರು ನಗರ ಬೆಳೆಯಬಾರದು ಎನ್ನುವ ಕಾರಣಕ್ಕಾಗಿ ಇನ್ನು ಹತ್ತು ವರ್ಷ ಕಾಲ ನಿವೇಶನಗಳನ್ನು ಕೊಡಲಾಗದಂತೆ ಆನಾಕರ್ಷಿತ ನಗರವಾಗಿ ಪರಿವರ್ತನೆ ಮಾಡಬಾರದೇಕೆ ಎಂದು ಒಂದು ಕಡೆ ಹೇಳುತ್ತಾ, ಹೆಳ್ಳಿಗಳ ಜನರಿಗೆ ಏಕೆ ನಿವೇಶನಗಳನ್ನು ಕೊಡಬಾರದು ಎಂದು ಅವರು ಹೇಳುವುದನ್ನು ನೋಡಿದರೆ ಮತ್ತೆ ಬೆಂಗಳೂರು ಬೆಳೆಯಬೇಕು ಎನ್ನುವ ಉದ್ದೇಶ ಕಾಣುತ್ತದೆ. ಆದರೆ ನಿವೇಶನಗಳನ್ನು ಜನರಿಗೆ ಕೊಡತಕ್ಕದ್ದು ವಾಸವಮಾಡಲಿಕ್ಕೆ ಅವರಿಗೂ ಒಂದು ಸೂರಿನ ಅಗತ್ಯ ವಿದೆ ಎಂಬ ಕಾರಣಕ್ಕಾಗಿ. ಆದರೆ ಬೆಂಗಳೂರು ಬೆಳೆಯಬಾರದು ಎನ್ನುವುದಕ್ಕೆ ಮಾನ್ಯ ತಿಮ್ಮೇಗೌಡರ ಪ್ರಶ್ನೆಗೆ ಈಗಾಗಲೇ ನಾನು ಉತ್ತರವನ್ನು ಕೊಟ್ಟಿದ್ದೇನೆ.

ಶ್ರೀ ಎನ್. ಎಸ್. ಬೇಡ್.—ಬೆಂಗಳೂರು ನಗರವನ್ನು ನೋಡಿದಾಗ ಅಥವಾ ಅಸೆಸ್ ಮಾಡಿದಾಗ ಬಹುಶಃ ನೂರಕ್ಕೆ ೮೦ ರಷ್ಟು ಜನ ಹೊರಭಾಗದಿಂದ ಬಂದಿರತಕ್ಕವರು ಇದ್ದಾರೆ. ಪ್ರತಿ ಯೊಂದು ಮನೆಯಿಂದ ಇವರು ಬೋರ್ಡುಗಳನ್ನು ನೋಡಿದಾಗ ಇದು ಗೊತ್ತಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಬಿ.ಡಿ.ಎ ಯಲ್ಲಿ ಇರತಕ್ಕಂಥ ರೂಲ್ಸ್ ಅಥವಾ ರೆಗ್ಯುಲೇಶನ್ಸ್‌ಗಳನ್ನು ವಾಡಿಫೈ ಮಾಡಿ ಏನು ಫ್ಲಡ್ ಗೇಟ್‌ನ್ನು ತೆರೆದಿದ್ದೇವೆ. ಅದನ್ನು ಮುಚ್ಚುವುದಕ್ಕೆ ಮಾನ್ಯ ಮಂತ್ರಿಗಳು ಏನಾದರೂ ವ್ಯವಸ್ಥೆ ಮಾಡುತ್ತಾರೆಯೇ ಎಂದು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮತ್ತೊಮ್ಮೆ ಪ್ರಶ್ನೆ ಕೇಳಿ.

ಶ್ರೀ ಎನ್. ಎಸ್. ಬೇಡ್.—ಈಗ ಪ್ರಸ್ತುತ ಪರಿಸ್ಥಿತಿಯನ್ನು ನೋಡಿದರೆ ಬೆಂಗಳೂರಿನಲ್ಲಿ ನೂರಕ್ಕೆ ಎಂಭತ್ತರಷ್ಟು ಜನ ಹೊರಗಡೆಯಿಂದ ಬಂದಿರುತ್ತಾರೆ. ಇಷ್ಟೇ ಅಲ್ಲ ಪ್ರತಿಯೊಂದು ರಸ್ತೆ ಯಲ್ಲಿ ಮನೆಗಳ ಮುಂದೆ ಇರುವ ಬೋರ್ಡುಗಳನ್ನು ನೋಡಿದರೆ ಗೊತ್ತಾಗುತ್ತದೆ. ಕನ್ನಡಿಗರಿಗೆ ಈ ರಾಜ್ಯದಲ್ಲಿ ಅವಕಾಶ ಇಲ್ಲ. ಇಂತಹ ಪಟ್ಟಣಗಳಲ್ಲಿ ಅವಕಾಶ ಇಲ್ಲ. ಇದಕ್ಕಾಗಿ ಈಗ ಇರತಕ್ಕಂಥ ಬಿ.ಡಿ.ಎ. ರೂಲ್ಸ್‌ನಲ್ಲಿ ಮತ್ತು ಕಾನೂನಿನಲ್ಲಿ ಒಂದು ರಿಜಿಡ್ ಆದ ನಿಯಮವನ್ನು ಅನುಸರಿಸಿ ಇನ್ನು ಮುಂದೆ ಉತ್ತರ ಭಾರತದಿಂದ ಬರತಕ್ಕಂಥ, ವ್ಯಾಪಾರಿ ಮನೋ ಭಾವನೆಯಿಂದ ಬರತಕ್ಕಂಥ ಜನರನ್ನು ತಡೆಗಟ್ಟಲಿಕ್ಕೆ ಒಂದು ಕಡಿವಾಣವನ್ನು ಹಾಕುತ್ತೀರಾ ಎಂದು ಮಾನ್ಯ ಮಂತ್ರಿಯವರನ್ನು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಮಾನ್ಯ ಸಭಾಧ್ಯಕ್ಷರೇ, ಇದರಲ್ಲಿ ಭಾರತೀಯ ನಾಗರೀಕ ಹಕ್ಕು ಭಾದ್ಯತೆಗಳ ಕುರಿತು ರಾಜ್ಯಾಂಗದತ್ತವಾಗಿರುವ ಅಧಿಕಾರದ ಬಗ್ಗೆ ನಾವು ಪರಿಶೀಲನೆ ಮಾಡಬೇಕಾಗು ತ್ತದೆ. ಮಾನ್ಯ ಸದಸ್ಯರು ಹೇಳಿದಂಥ ಸಲಹೆ ಸೂಕ್ತವಾಗಿರತಕ್ಕದ್ದು. ಬೆಂಗಳೂರು ಆಕರ್ಷಿತ ನಗರವಲ್ಲದೆ ಇರುವಹಾಗೆ ಪರಿವರ್ತನೆಗೊಂಡಾಗ ನಿವೇಶನಗಳನ್ನು ಕೊಡದೇ ಇರುವುದಕ್ಕೆ ಸಾಧ್ಯ ವಾಗುತ್ತದೆ. ಆದರೆ ನಿವೇಶನಗಳನ್ನು ಕೊಡುವ ವಿಚಾರದಲ್ಲಿ ಹೊರಗಡೆಯಿಂದ ಬರತಕ್ಕಂಥವರಿಗೆ ಕೊಡಲಾಗದಂಥ ವ್ಯವಸ್ಥೆಯನ್ನು ಮಾಡುವ ಬಗ್ಗೆ ಕ್ರಮ ತೆಗೆದುಕೊಳ್ಳುವುದಾದರೆ ಇದನ್ನು ಪರಿಶೀಲಿಸಿ ಸೂಕ್ತ ಕ್ರಮವನ್ನು ಕೈಗೊಳ್ಳುತ್ತೇವೆ.

ಶ್ರೀ ಎನ್. ಎಸ್. ಬೇಡ್.—ಈಗಾಗಲೇ ಮದ್ರಾಸ್ ನಗರದಲ್ಲಿ ಕ್ರಮ ಕೈಗೊಂಡಿದ್ದಾರೆ. ಅಂತಹ ಕಾರ್ಯಕ್ರಮವನ್ನು ನಮ್ಮ ರಾಜ್ಯದಲ್ಲಿ ಈ ಪಟ್ಟಣದಲ್ಲಿ ಏಕೆ ಕೈಗೊಳ್ಳಬಾರದು ಎಂದು ನಾನು ಕೇಳುತ್ತೇನೆ.

ಶ್ರೀ ಎಂ. ಪಿ. ಪ್ರಕಾಶ್.—ಈ ಸಲಹೆಯನ್ನು ನಾನು ಪರಿಶೀಲಿಸುತ್ತೇನೆ.

ಗೋಕಾಕ್ ತಾಲ್ಲೂಕಿಗೆ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡುವುದು.

೭೭೩. ಶ್ರೀ ಎಂ. ಎಲ್. ಮುತ್ತಣ್ಣನವರ್ (ಗೋಕಾಕ್).— ಮಾನ್ಯ ಗ್ರಾಮಾಣಾಭಿವೃದ್ಧಿ, ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಗೋಕಾಕ್ ತಾಲ್ಲೂಕಿನ ಕಡಬಗಟ್ಟಿ ಮತ್ತು ನೆಲಗಂಟಿ ಗ್ರಾಮಗಳಿಗೆ ಕುಡಿಯುವ ನೀರಿನ ಯೋಜನೆ ಮಂಜೂರು ಮಾಡಲಾಗಿದೆಯೇ ?